## ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿ ಇವರ ನ್ಯಾಯಾಲಯ
## ಚನ್ನರಾಯಪಟ್ಟಣ

-:: ಉಪಸ್ಥಿತರು ::-

**ಶ್ರೀ ರವಿ ಬಿ. ಚವ್ಹಾಣ,**

ಬಿ.ಎ., ಎಲ್‌ಎಲ್.ಬಿ.,(ಸ್ಪೆಷಲ್)

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ.,
ಚನ್ನರಾಯಪಟ್ಟಣ.

**ಅಸಲು ದಾವಾ ಸಂಖ್ಯೆ: 270/2008**

**ದಿನಾಂಕ: 17ನೇ ಡಿಸೆಂಬರ್ 2015**

**ವಾದಿ** : **ಶ್ರೀಮತಿ ಜಯಮ್ಮ ಕೋಂ ವೆಂಕಟರಮಣ**

**-: ವಿರುದ್ಧ :-**

**ಪ್ರತಿವಾದಿಯರು** : **ಶ್ರೀ ವೆಂಕಟೇಗೌಡ ಬಿನ್ ಪೌತಿ ರಂಗೇಗೌಡ ಮತ್ತು ಇತರರು**

**ಮಧ್ಯ ಕಾಲೀನ ಅರ್ಜಿ ನಂ.9**

**ಅರ್ಜಿದಾರರು** : **ಚಂದ್ರು ಬಿನ್ ವೆಂಕಟೇಗೌಡ**
**(ಪ್ರತಿವಾದಿ-(1)ಎ)**

**-: ವಿರುದ್ಧ :-**

**ಎದುರುದಾರರು** : **ಶ್ರೀಮತಿ ಜಯಮ್ಮ ಕೋಂ ವೆಂಕಟರಮಣ**
**(ವಾದಿ)**

## ಮದ್ಯಕಾಲೀನ ಅರ್ಜಿ ನಂ. 9 ರ ಮೇಲೆ ಆದೇಶ

ಅರ್ಜಿದಾರ/ಪ್ರತಿವಾದಿ ನಂ.1(ಎ) ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 16 ನಿಯಮ 6 ಸಹವಾಚಕ 151 ರ ರೀತ್ಯಾ ಮದ್ಯಕಾಲೀನ ಅರ್ಜಿ ನಂ.9 ಸಲ್ಲಿಸಿ, ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವೆಂಕಟೇಗೌಡರು ದಿನಾಂಕಃ17.01.1985 ರಂದು ಬರೆದಿಟ್ಟಿರುವುದೆನ್ನಲಾದ ವಿಲ್ ಯಾ ಮರಣಶಾಸನ ಪತ್ರವು ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ ರವರ ಬಳಿ ಇದ್ದು ಸದರಿ ಮರಣ ಶಾಸನ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನಿರ್ದೇಶನ ಕೋರಿ ಸಲ್ಲಿಸಿರುತ್ತಾರೆ.

***:: ವಿಳಾಸ ಃ-***

***ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ,***
***ಸುಮಾರು 60 ವರ್ಷ ವಯಸ್ಸು,***
***ಮಾರೇನಹಳ್ಳಿ ಗ್ರಾಮ, ಕಸಬಾ ಹೋಬಳಿ,***
***ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.***

2. ಅರ್ಜಿದಾರ/ಪ್ರತಿವಾದಿ-1(ಎ) ತನ್ನ ಅರ್ಜಿಯೊಂದಿಗೆ ಸಲ್ಲಿಸಿದ ತನ್ನ ಪ್ರಮಾಣ ಪತ್ರಿಕೆಯಲ್ಲಿ, ತಾನು ದಾವಾದಲ್ಲಿ ಮೃತ 1ನೇ ಪ್ರತಿವಾದಿಯ ವಾರಸುದಾರನಾಗಿದ್ದು, ವೆಂಕಟೇಗೌಡ ರವರು ದಿನಾಂಕಃ17.01.1985 ರಂದು ಬರೆದಿಟ್ಟಿರುವ ಮರಣಶಾಸನ ಪತ್ರವು ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ ಎಂಬುವವರ ಬಳಿ ಇದ್ದು ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ತರಿಸಿಕೊಳ್ಳಬೇಕಾಗಿರುವುದು ಅತ್ಯಾವಶ್ಯಕವಾಗಿರುವುದರಿಂದ ತಾನು ಲಗತ್ತು ಅರ್ಜಿಯನ್ನು ತಂದಿರುತ್ತೇನೆಂದು, ಘನ ನ್ಯಾಯಾಲಯವು ತಂದಿರುವ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತನಗೆ ತುಂಬಲಾರದ ಕಷ್ಟನಷ್ಟಗಳು ಸಂಭವಿಸುತ್ತವೆಂದು,

ಪುರಸ್ಕರಿಸಿದ ಪಕ್ಷದಲ್ಲಿ ಎದುರುದಾರನಿಗೆ ಯಾವುದೇ ಕಷ್ಟನಷ್ಟಗಳು ಸಂಭವಿಸುವುದಿಲ್ಲವೆಂದು ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿಕೊಂಡಿರುತ್ತಾರೆ.

3. ವಾದಿಯು ಅರ್ಜಿದಾರ ಸಲ್ಲಿಸಿದ ಮಧ್ಯಂತ ಅರ್ಜಿ ಸಂಖ್ಯೆ 9ಕ್ಕೆ ಲಿಖಿತ ತಕರಾರು ಸಲ್ಲಿಸಿ ತನ್ನ ತಕರಾರಿನಲ್ಲಿ, ಪ್ರತಿವಾದಿಯು ತಂದಿರುವ ಅರ್ಜಿಯು ಕಾನೂನಿನ ವಿದ್ಯಾಮಾನಗಳಡಿ ನಿಲ್ಲತಕ್ಕದ್ದಲ್ಲವೆಂದು, ಪ್ರತಿವಾದಿಯು ತನ್ನ ಮುಖ್ಯ ಕಂಡಿಕೆಯಲ್ಲಿ ವಾದಿಯು ಎಂದು ತಪ್ಪಾಗಿ ಅರ್ಜಿಯು ಮುಖ್ಯ ಕಂಡಿಕೆಯಲ್ಲಿ ನಮೂದು ಮಾಡಿದ್ದು ಈ ಕಾರಣಕ್ಕಾಗಿಯೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕೆಂದು, ಪ್ರತಿವಾದಿಯು ತಮ್ಮ ಅರ್ಜಿಯಲ್ಲಿ ದಿನಾಂಕಃ17.01.1985 ರ ಮರಣ ಶಾಸನ ಪತ್ರ ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ ಮಾರೇನಹಳ್ಳಿ ಗ್ರಾಮ, ಎಂಬುವವರ ಬಳಿ ಇದೆ ಎಂದು ತಿಳಿಸಿದ್ದು ತಮ್ಮ ದಾವೆಯಲ್ಲಿ ಸಾಕ್ಷಿದಾರರ ವಿಚಾರಣೆಯ ಸಂದರ್ಭದಲ್ಲಿ ಅವರ ಮೂಲಕ ಹಾಜರುಪಡಿಸಬಹುದಾಗಿರುತ್ತದೆಂದು, ಸದರಿ ದಾಖಲೆಯನ್ನು ನ್ಯಾಯಾಲಯದ ಸಮನ್ಸ್ ಮೂಲಕ ತರಿಸಿಕೊಳ್ಳುವ ಅವಶ್ಯಕವಾಗಿರುವುದಿಲ್ಲವೆಂದು, ಪ್ರತಿವಾದಿಯರು ಸದರಿ ದಾವೆಯನ್ನು ವಿಳಂಭ ಮಾಡುವ ಉದ್ದೇಶದಿಂದ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ಹೇಳಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

4. ಅರ್ಜಿದಾರನ ತನ್ನ ಅರ್ಜಿಯೊಂದಿಗೆ ಸಲ್ಲಿಸಿದ ತನ್ನ ಪ್ರಮಾಣ ಪತ್ರದಲ್ಲಿ ಹೇಳಿದ ಆಂಶಗಳು ಮತ್ತು ವಾದಿಯರು ಸಲ್ಲಿಸಿದ ಲಿಖಿತ ತಕರಾರಿನ ಅಂಶಗಳು

ಕೂಲಂಕುಷವಾಗಿ ಪರಿಶೀಲಿಸಲಾಗಿದೆ ಮತ್ತು ವಾದಿ ಮತ್ತು ಪ್ರತಿವಾದಿ ಪರ ವಕೀಲರು ವಾದವನ್ನು ಕೇಳಲಾಯಿತು.

5. ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸುವುದು ಅವಶ್ಯಕವೆಂದು ಕಂಡು ಬರುತ್ತದೆ.

1. ಅರ್ಜಿದಾರ ಸದರೀ ಅರ್ಜಿ ನಂ.9 ನ್ನು ಪುರಸ್ಕರಿಸಲು ಸಕಾರಣಗಳು ಇರುತ್ತದೆಂದು ರುಜುವಾತುಪಡಿಸುತ್ತಾರೆಯೇ?

2. ಯಾವ ಆದೇಶ?

6. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ***ಸಕಾರಾತ್ಮಕವಾಗಿ***
ಅಂಶ ನಂ.2 : ಅಂತಿಮ ಆದೇಶ, ಈ ಕೆಳಕಂಡ ಕಾರಣಗಳಿಗಾಗಿ

***:: ಕಾ ರ ಣ ಗ ಳು ::-***

**7. ಅಂಶ–1 :** ಸದರಿ ಪ್ರಕರಣದಲ್ಲಿ ವಾದಿಯರ ಪರ ಸಾಕ್ಷಿವಿಚಾರಣೆ ಮುಗಿದಿದ್ದು ಸದರಿ ಪ್ರಕರಣವನ್ನು 1ನೇ ಪ್ರತಿವಾದಿಯ ಪಾಟೀ ಸವಾಲಿಗೆಂದು ಮುಂದೂಡಲಾಗಿರುತ್ತದೆ.

8. ಅರ್ಜಿದಾರ/ಪ್ರತಿವಾದಿ-1(ಎ) ತನ್ನ ಅರ್ಜಿಯೊಂದಿಗೆ ಸಲ್ಲಿಸಿದ ತನ್ನ ಪ್ರಮಾಣ ಪತ್ರಿಕೆಯಲ್ಲಿ, ತಾನು ದಾವಾದಲ್ಲಿ ಮೃತ 1ನೇ ಪ್ರತಿವಾದಿಯ ವಾರಸುದಾರನಾಗಿದ್ದು, ವೆಂಕಟೇಗೌಡ ರವರು ದಿನಾಂಕ:17.01.1985 ರಂದು

ಬರೆದಿಟ್ಟಿರುವ ಮರಣಶಾಸನ ಪತ್ರವು ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ ಎಂಬುವವರ ಬಳಿ ಇದ್ದು ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ತರಿಸಿಕೊಳ್ಳಬೇಕಾಗಿರುವುದು ಅತ್ಯಾವಶ್ಯಕವಾಗಿರುವುದರಿಂದ ತಾನು ಲಗತ್ತು ಅರ್ಜಿಯನ್ನು ತಂದಿರುತ್ತೇನೆಂದು, ಘನ ನ್ಯಾಯಾಲಯವು ತಂದಿರುವ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತನಗೆ ತುಂಬಲಾರದ ಕಷ್ಟನಷ್ಟಗಳು ಸಂಭವಿಸುತ್ತವೆಂದು, ಪುರಸ್ಕರಿಸಿದ ಪಕ್ಷದಲ್ಲಿ ಎದುರುದಾರನಿಗೆ ಯಾವುದೇ ಕಷ್ಟನಷ್ಟಗಳು ಸಂಭವಿಸುವುದಿಲ್ಲವೆಂದು ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿಕೊಂಡಿರುತ್ತಾರೆ.

9. ವಾದಿಯು ಅರ್ಜಿದಾರ ಸಲ್ಲಿಸಿದ ಮಧ್ಯಂತ ಅರ್ಜಿ ಸಂಖ್ಯೆ 9ಕ್ಕೆ ಲಿಖಿತ ತಕರಾರು ಸಲ್ಲಿಸಿ ತನ್ನ ತಕರಾರಿನಲ್ಲಿ, ಪ್ರತಿವಾದಿಯು ತಂದಿರುವ ಅರ್ಜಿಯು ಕಾನೂನಿನ ವಿದ್ಯಾಮಾನಗಳಡಿ ನಿಲ್ಲತಕ್ಕದ್ದಲ್ಲವೆಂದು, ಪ್ರತಿವಾದಿಯು ತನ್ನ ಮುಖ್ಯ ಕಂಡಿಕೆಯಲ್ಲಿ ವಾದಿಯು ಎಂದು ತಪ್ಪಾಗಿ ಅರ್ಜಿಯು ಮುಖ್ಯ ಕಂಡಿಕೆಯಲ್ಲಿ ನಮೂದು ಮಾಡಿದ್ದು ಈ ಕಾರಣಕ್ಕಾಗಿಯೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕೆಂದು, ಪ್ರತಿವಾದಿಯು ತಮ್ಮ ಅರ್ಜಿಯಲ್ಲಿ ದಿನಾಂಕಃ17.01.1985 ರ ಮರಣ ಶಾಸನ ಪತ್ರ ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ ಮಾರೇನಹಳ್ಳಿ ಗ್ರಾಮ, ಎಂಬುವವರ ಬಳಿ ಇದೆ ಎಂದು ತಿಳಿಸಿದ್ದು ತಮ್ಮ ದಾವೆಯಲ್ಲಿ ಸಾಕ್ಷಿದಾರರ ವಿಚಾರಣೆಯ ಸಂದರ್ಭದಲ್ಲಿ ಅವರ ಮೂಲಕ ಹಾಜರುಪಡಿಸಬಹುದಾಗಿರುತ್ತದೆಂದು, ಸದರಿ ದಾಖಲೆಯನ್ನು ನ್ಯಾಯಾಲಯದ ಸಮನ್ಸ್ ಮೂಲಕ ತರಿಸಿಕೊಳ್ಳುವ ಅವಶ್ಯಕವಾಗಿರುವುದಿಲ್ಲವೆಂದು, ಪ್ರತಿವಾದಿಯರು ಸದರಿ ದಾವೆಯನ್ನು ವಿಳಂಬ

ಮಾಡುವ ಉದ್ದೇಶದಿಂದ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ಹೇಳಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

10. ಈ ಪ್ರಕರಣದಲ್ಲಿ ವಾದಿಯರ ಪರ ಸಾಕ್ಷಿವಿಚಾರಣೆ ಮುಗಿದಿದ್ದು ಸದರಿ ಪ್ರಕರಣವನ್ನು 1ನೇ ಪ್ರತಿವಾದಿಯ ಪಾಟೀ ಸವಾಲಿಗೆಂದು ಮುಂದೂಡಲಾಗಿರುತ್ತದೆ. ಈ ಹಂತದಲ್ಲಿ ಅರ್ಜಿದಾರ/ಪ್ರತಿವಾದಿ-1(ಎ) ಅರ್ಜಿಯನ್ನು ಸಲ್ಲಿಸಿ ತನ್ನ ಶಪಥ ಪತ್ರದಲ್ಲಿ ವೆಂಕಟೇಗೌಡ ರವರು ದಿನಾಂಕಃ17.01.1985 ರಂದು ಬರೆದಿಟ್ಟಿರುವ ಮರಣಶಾಸನ ಪತ್ರವು ತಿಮ್ಮೇಗೌಡ ಬಿನ್ ಸಣ್ಣಪಾಪಣ್ಣ ಎಂಬುವವರ ಬಳಿ ಇದ್ದು ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ತರಿಸಿಕೊಳ್ಳಬೇಕಾಗಿರುವುದು ಅತ್ಯಾವಶ್ಯಕವಾಗಿರುವುದರಿಂದ ತಾನು ಲಗತ್ತು ಅರ್ಜಿಯನ್ನು ತಂದಿರುತ್ತೇನೆಂದು ಹೇಳಿರುತ್ತಾರೆ.

11. ಅರ್ಜಿಯನ್ನು ಮಾನ್ಯ ಮಾಡಿ ದಾಖಲಾತಿಗಳನ್ನು ಪ್ರಕರಣವನ್ನು ಪುನಃ ತೆರೆಯಲು ವಾದಿಯ ಪರ ಸಾಕ್ಷಿ ವಿಚಾರಣೆಗೆ ಅವಕಾಶ ಮಾಡಿ ಕೊಟ್ಟಿದ್ದಲ್ಲಿ ಪ್ರತಿವಾದಿಗೆ ಯಾವುದೇ ರೀತಿಯ ನಷ್ಟ ಉಂಟಾಗುವುದಿಲ್ಲ ಮತ್ತು ಪ್ರತಿವಾದಿಯು ಪಾಟೀ ಸವಾಲು ಮಾಡಲು ಹಕ್ಕುನ್ನು ಹೊಂದಿರುತ್ತಾನೆ, ಇದಕ್ಕೆ ಹೊರತಾಗಿ ಈ ಪ್ರಕರಣದಲ್ಲಿ ಉಭಯ ಪಕ್ಷಗಾರರ ನಡುವಿನ ವ್ಯಾಜ್ಯವನ್ನು ವಿದ್ಯುಕ್ತವಾಗಿ ತೀರ್ಮಾನಿಸುವುದಕ್ಕೆ ಸಹಾಯಕವಾಗುತ್ತದೆ. ಸಾಕ್ಷಿದಾರರನ್ನು ಪುನಃ ಕರೆಯಿಸಿ ವಿಚಾರಣೆ ಮಾಡಿಕೊಳ್ಳುವ ವಿವೇಚನಾ ಅಧಿಕಾರ ನ್ಯಾಯಾಲಯಕ್ಕೆ ಇರುತ್ತದೆ. ವಾದಿ ಅರ್ಜಿಗಳನ್ನು ಸಲ್ಲಿಸಲು ಕಾಲವಿಳಂಬ ಮಾಡಿದರು ಸಹ ಸದರಿ ವಿಳಂಬಕ್ಕೆ ಪರಿಹಾರತ್ಮಕವಾಗಿ ಖರ್ಚುಗಳನ್ನು ವಿಧಿಸಿ ಈ ಅರ್ಜಿಗಳನ್ನು ಪುರಸ್ಕರಿಸುವುದರಿಂದ

ಪ್ರತಿವಾದಿಗೆ ನ್ಯಾಯದ ಹಿನ್ನಡೆ ಉಂಟಾಗುವುದಿಲ್ಲವೆಂದು ಮತ್ತು ಪ್ರಕರಣ ಸಮರ್ಪಕವಾಗಿ ವಿಚಾರಣೆಯಾಗಿ ವಿದ್ಯುಕ್ತ ನ್ಯಾಯ ವಿತರಣೆಯಾಗುತ್ತದೆಂದು ಅಭಿಪ್ರಾಯಪಟ್ಟು ಪ್ರಕರಣವನ್ನು ಅಂಶ ನಂ.1ನ್ನು ***ಸಕಾರಾತ್ಮಕವಾಗಿ*** ಉತ್ತರಿಸಲಾಗಿದೆ.

12. **ಅಂಶ-2** :- ಈ ಮೇಲಿನ 1ನೇ ಅಂಶ ಚರ್ಚೆಯಿಂದ ಮತ್ತು ಅವುಗಳಿಗೆ ನೀಡಿದ ಉತ್ತರಗಳಿಂದ ಈ ಕೆಳಗಿನಂತೆ ಅಂತಿಮ ಆದೇಶ ಮಾಡಲಾಗಿದೆ.

**-:: ಆದೇಶ ::-**

ಅರ್ಜಿದಾರ/ಪ್ರತಿವಾದಿ-1(ಎ) ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ ನಿಯಮ 6 ಸಹವಾಚಕ 151 ರ ರೀತ್ಯಾ ಅರ್ಜಿ ಸಂಖ್ಯೆ 9ನ್ನು ರೂ.100/- ರಂತೆ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ಕೊಟ್ಟು ನಂತರ ತಪ್ಪುಗಳನ್ನು ತಿದ್ದುಪಡಿ ಮಾಡಿ, ತಪ್ಪಿದ್ದಲ್ಲಿ ತಿದ್ದಿ ಇವತ್ತು ದಿನಾಂಕ 17ನೇ ಡಿಸೆಂಬರ್ 2015 ರಂದು ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ರವಿ ಬಿ. ಚವ್ಹಾಣ)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಚನ್ನರಾಯಪಟ್ಟಣ.